<u>ದಿನಾಂಕ **22.07.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಪಾಟಿ ಸವಾಲು ಃ ಆರೋಪಿ ಪರ ವಕೀಲರಿಂದ</u>

ನಮ್ಮ ಮನೆಯ ಗೃಹ ಉಪಯೋಗಕ್ಕೆ 20 ಸಾವಿರ ಬೇಕಾಗುತ್ತದೆ ಎಂದರೆ ಸರಿಯಲ್ಲ. 5 ಸಾವಿರ ಸಾಕಾಗುತ್ತದೆ. ಈಗಿನ ಖರ್ಚಿನಲ್ಲಿ 5 ಸಾವಿರ ಯಾವುದಕ್ಕೂ ಸಾಕಾಗುದಿಲ್ಲ ಕನಿಷ್ಟ 20 ಸಾವಿರ ಬೇಕು ಎಂದರೆ ಸರಿಯಲ್ಲ. ಸುಮಾರು 35 ವರ್ಷಗಳಿಂದ ಹಣವನ್ನು ಕೊಡುತ್ತಿದ್ದರು ನಾನು ಕೂಡಿ ಇಡುತ್ತಿದ್ದೆ. ಕೂಡಿಟ್ಟ ಹಣವನ್ನು ಮನೆಯ ಬೀರುನಲ್ಲಿ ಇಟ್ಟಿದ್ದೆ. ನಾನು ಕೂಡಿಟ್ಟಿದ್ದ ಹಣ ಅಂದಾಜು 10 ಲಕ್ಷ ಇಟ್ಟಿದ್ದೆ. ನಾನು ಮನೆ ಕಟ್ಟುವ ಉದ್ದೇಶದಿಂದ ಆ ಹಣವನ್ನು ಇಟ್ಟುಕೊಂಡಿದ್ದೆ. ಪ್ರತಿ ತಿಂಗಳು ಖರ್ಚು ಉಳಿದ ಹಣವನ್ನು ಕೂಡಿಟ್ಟಿರುತ್ತೇನೆ. ನನ್ನ ಗಂಡ ನನ್ನಿಂದ 1 ರಿಂದ 2 ಸಾವಿರ ಹಣವನ್ನು ತಿಂಗಳಿ ಒಂದು ಸಾರಿ ಕೇಳಿ ಪಡೆಯುತ್ತಿದ್ದರು. ಹಣವನ್ನು ತೆಗೆದುಕೊಂಡು ಹೋಗಲು ಆರೋಪಿ ಒಬ್ಬರೇ ಬಂದಿದ್ದರು. ಎರಡು ಸಲ ಆರೋಪಿಯನ್ನು ನಾನು ಹಣವನ್ನು ಅವರ ಮನೆಯಲ್ಲಿ ಕೇಳಿರುತ್ತೇನೆ. ಆ ದಿನಾಂಕ ಹೇಳಲಾಗುವುದಿಲ್ಲ. ಒಂದು ಸಲ ಹಣ ಕೇಳಿದ ಒಂದು ವಾರದ ನಂತರ ನಾನು ಪುನಹ ಹಣ ಕೇಳಿರುತ್ತೇನೆ. ಇನ್ನೂ 6 ಂತಿಗಳು ಬಿಟ್ಟು ಹಣ ಕೋಡುತ್ತೇನೆ ಎಂದು ಹೇಳಿದ್ದರು. 6 ತಿಂಗಳು ಬಿಟ್ಟು ಪುನಹ ಕೇಳಿದೆ. ನಾನು ಒಬ್ಬಳೇ ಹೋಗಿ ಹಣ ಕೇಳಿರುತ್ತೇನೆ. ನಂತರ ಆರೋಪಿ ಚೆಕ್ಕನ್ನು ಕೊಟ್ಟಿರುತ್ತಾರೆ. ದಿಃ06.08 ರಂದು ಚೆಕ್ಕನ್ನು ಬ್ಯಾಂಕ್ ಗೆ ಹಾಕಿರುತ್ತೇನೆ. ಈ ವಿಚಾರಗಳನ್ನು ದೂರಿನಲ್ಲಿ ಹೇಳಿರುತ್ತೇನೆ. ನನ್ನ ವಕೀಲರ ನೊಟೀಸ್ ನಲ್ಲಿ ಹೇಳಿರುತ್ತೇನೆ. ಚೆಕ್ಕು ಅಮಾನ್ಯ ಗೊಂಡ ನಂತರ ನಾನು ಆರೋಪಿಗೆ ಹಣ ಕೇಳಿಲ್ಲ. ನನಗೆ ಹುಷಾರಿಲ್ಲದ ಕಾರಣ ನಾನು ಕೇಳಲು ಹೋಗಿಲ್ಲ. ನನಗೆ ಹುಷಾರಾದ ನಂತರ ಪುನಹ ಹೋಗಿ ಕೇಳಿಲ್ಲ. ನಾನು ಹೇಳಿದ ರೀತಿಯಲ್ಲಿ ಆರೋಪಿ ನನ್ನಲ್ಲಿ ಹಣ ಕೇಳಿಲ್ಲ ನಾನು ಯಾವುದೇ ಹಣವನ್ನು ಆರೋಪಿಗೆ ನೀಡಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಆರೋಪಿ ನನಗೆ ಚೆಕ್ಕನ್ನು ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನನಗೆ ಯಾವುದೇ ಹಣ ನೀಡಲು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ. ನಾನು ಎಸ್ ಕೆ ಎಸ್ ಫೈನಾನ್ಸ್ ನಲ್ಲಿ ಹಣ ಪಡೆದಿದ್ದೇನೆ ಎಂದರೆ ಸರಿ. ವಾಪಾಸ್ಸು ಕಟ್ಟುತ್ತಿದ್ದೇನೆ. ಎಲ್ಲಾ ಸಾಲಗಳಿಗೆ ನಾನು ಬಡ್ಡಿಕಟ್ಟುತ್ತಿದ್ದೇನೆ ಎಂದರೆ ಸರಿ. ನಾನು ಆರೋಪಿಗೆ ಯಾವುದೇ ಹಣ ನೀಡದಿದ್ದರೂ ಸಹ ನಾನು ಮತ್ತು ಆರೋಪಿ ಮೈಕ್ರೋ ಪೈನಾನ್ಸ್ ನಲ್ಲಿ ಸದಸ್ಯರಾಗಿದ್ದು, ನಾನು ಕಾರ್ಯದರ್ಶಿಯಾಗಿದ್ದು ಆ ಸಾಲಕ್ಕಾಗಿ ಆರೋಪಿ ನೀಡಿದ ಚೆಕ್ಕನ್ನು ನಾನು ದುರುಪಯೋಗ ಪಡಿಸಿಕೊಂಡು ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ಮತ್ತು ನಾನು ಪ್ರತಿನಿಧಿಗಳು ಆಗಿರುತ್ತೇವೆ. ಆರೋಪಿ ನೀಡಿದ ಖಾಲಿ ಚೆಕ್ಕಿಗೆ ನಾನೇ ತುಂಬಿಸಿಕೊಂಡು ಪ್ರಕರಣ ದಾಖಲಿಸಿರುತೆತೇನೆ ಎಂದರೆ ಸರಿಯಲ್ಲ. ಅಕ್ರಮ ಲಾಭ ಪಡೆಯಲು ಸುಳ್ಳು ಪ್ರಕರಣದ ದಾಖಲಿಸಿ ಸುಳ್ಳು ನುಡಿಯುತ್ತಿದ್ದೇನೆ

ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

sd/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಚನ್ನರಾಯಪಟ್ಟಣ.